**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ SAP ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ಸ.ನಂ. 79/*/* ರ ಎರಡು ಪುಟದಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-1 ಎಂದು, ಒಪ್ಪಿಗೆ ಪತ್ರದ ದೃಢಿಕೃತ ನಕಲನ್ನು ನಿಪಿ-2 ಎಂದು, ಸಹಾಯಕ ಆಯುಕ್ತರು ಕಲಬುರಗಿರವರ ನಡುವಳಿಗಳ ದೃಢಿಕೃತ ನಕಲನ್ನು ನಿಪಿ-3 ಎಂದು, ಜಿಲ್ಲಾಧಿಕಾರಿರವರ ಆದೇಶದ ದೃಢಿಕೃತ ನಕಲನ್ನು ನಿಪಿ-4 ಎಂದು, ಸಹಾಯಕ ಆಯುಕ್ತರ ಮುಂದೆ ಸಲ್ಲಿಸಿದ ತಕರಾರಿನ ದೃಢಿಕೃತ ನಕಲನ್ನು ನಿಪಿ-5 ಎಂದು, ಒಪ್ಪಿಗೆ ಪತ್ರದ ದೃಢಿಕೃತ ನಕಲನ್ನು ನಿಪಿ-6 ಎಂದು, ಸ.ನಂ. 79ರ 6 ಪುಟಗಳಲ್ಲಿರುವ ಕೈಬರಹ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ನಿಪಿ-7 ಎಂದು ಮತ್ತು ಹಿಂಬರಹ ದೃಢಿಕೃತ ನಕಲನ್ನು ನಿಪಿ-8 ಎಂದು ಗುರುತಿಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**